
ಭೋಜರಾಜ ಸೊಪ್ಪಿಮಠ



# ಪ್ರಾಮಾಣಿಕತೆಯ ಪ್ರತಿಫಲ

ಒಂದು ಸಣ್ಣ ಹಳ್ಳಿ. ಅಲ್ಲಿ ಸೋಮು ಎಂಬ ಹುಡುಗನಿದ್ದು. 7ನೇ ತರಗತಿಯಲ್ಲಿ ಓದುತ್ತಿದ್ದ. ಪ್ರಾಮಾಣಿಕನಾಗಿದ್ದ. ಎಲ್ಲಾ ಶಿಕ್ಷಕರ ಅಚ್ಚುಮೆಚ್ಚಿನ ವಿದ್ಯಾರ್ಥಿ. ಅವನ ಒಳ್ಳೆಯತನ ನೋಡಿ ಎಲ್ಲರೂ ಅವನನ್ನು ಪ್ರೀತಿಸುತ್ತಿದ್ದರು. ಸೋಮುನ ತಂದೆತಾಯಿ ಬಡವರು. ಕೂಲಿ ಕೆಲಸ ಮಾಡಿ ಬದುಕುತ್ತಿದ್ದರು.

ಒಮ್ಮೆ ಅಡುಗೆಗೆ ತರಕಾರಿ ಬೇಕಾಗಿತ್ತು. ಸೋಮುನ ತಾಯಿ ಸಂತೆಗೆ ಹೋಗಿ ತರಕಾರಿ ತರುವಂತೆ ಹೇಳಿ, ಸೋಮುಗೆ ನೂರು ರೂಪಾಯಿ ನೋಟು ಕೊಟ್ಟು ಕಳಿಸಿದಳು. ಇರುವುದು ಈ ನೂರು ರೂಪಾಯಿ ಮಾತ್ರ, ಚಿಲ್ಲರೆಯನ್ನು ಸರಿಯಾಗಿ ಲೆಕ್ಕಹಾಕಿ ತೆಗೆದುಕೊಂಡು ಬಾ ಅಂತಲೂ ತಿಳಿಸಿದಳು.